**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/46/ಚುನಾವಣೆ/ಅಸೂ/2013–14

3 ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್,
ಶಾಂತಿನಗರ, ಬೆಂಗಳೂರು, 560 027
ದಿನಾಂಕ: 20–5–2014

## –:ಅಧಿಸೂಚನೆ:–

**ವಿಷಯ:–** ದಿನಾಂಕ:31.03.2014ಕ್ಕೆ ಅವಧಿ ಮುಗಿಯಲಿರುವ ಮಾಧ್ಯಮಿಕ ಸಹಕಾರ ಸಂಘಗಳು, ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ ನಡೆಸುವ ಕುರಿತು ಪರಿಷ್ಕೃತ ಅಧಿಸೂಚನೆ.

**ಉಲ್ಲೇಖ:–**
1. ಆಯೋಗದ ಅಧಿಸೂಚನೆ :ಸಚುಆ/46/ಚುನಾವಣೆ/ ಅಸೂ/ 2013–14 2013–14 ದಿನಾಂ:16.01.2014
2. ಗೌರವ ಉಚ್ಚ ನ್ಯಾಯಾಲಯವು ರಿಟ್ ಅಪೀಲ್ ಸಂಖ್ಯೆ: 734/2014 C/W, W.A. No.s 780-784/2014, WA No.792-796/2014, WA No.797-806/2014, WA No.808-815/2014, WA No.851/2014, WA No.866/2014 (CS-EL/M) ಗಳಲ್ಲಿ ದಿನಾಂಕ:30–4–2014 ರಂದು ನೀಡಿರುವ ಆದೇಶ / ತೀರ್ಪು
3. ಆಯೋಗದ ದಿನಾಂಕ:14–5–2014 ರಂದು ನಡೆದ ಸಭೆಯ ನಡವಳಿಗಳು

***

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 39 'ಎ' ದ ಅವಕಾಶದಂತೆ, ಸಹಕಾರ ಚುನಾವಣಾ ಆಯೋಗವು ವಿವಿಧ ವರ್ಗಗಳ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಸಂಬಂಧ ಉಲ್ಲೇಖ (1) ರಲ್ಲಿ ಅಧಿಸೂಚನೆಯನ್ನು ಹೊರಡಿಸಿ ಚುನಾವಣಾ ದಿನಾಂಕ/ಅವಧಿಯನ್ನು ಗೊತ್ತುಪಡಿಸಲಾಗಿತ್ತು. ಸದರಿ ಅಧಿಸೂಚನೆಯಂತೆ ಮಾಧ್ಯಮಿಕ ಸಹಕಾರ ಸಂಘಗಳ ಚುನಾವಣೆ ಈಗಾಗಲೇ ಪೂರ್ಣಗೊಂಡಿರುತ್ತದೆ ಹಾಗೂ ಫೆಡರಲ್ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣಾ ಪ್ರಕ್ರಿಯೆ ಈಗಾಗಲೇ ಪ್ರಾರಂಭಗೊಂಡಿರುತ್ತದೆ. ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಂಘಗಳಿಗೆ ಸಂಬಂಧಿಸಿದಂತೆ ಚುನಾವಣೆಯನ್ನು ದಿ:28–6–2014 ರಿಂದ 30–6–2014 ರವರೆಗೆ ನಡೆಸುವ ಬಗ್ಗೆ ಉಲ್ಲೇಖ (1) ರ ಅಧಿಸೂಚನೆಯಲ್ಲಿ ದಿನಾಂಕಗಳನ್ನು ಗೊತ್ತುಪಡಿಸಲಾಗಿತ್ತು.

ಗೌರವ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು ರಿಟ್ ಅಪೀಲ್ ಸಂಖ್ಯೆ: 734/2014 C/W, W.A. No.s 780-784/2014, WA No.792-796/2014, WA No.797-806/2014, WA No.808-815/2014, WA No.851/2014, WA No.866/2014 (CS-EL/M) ಗಳಲ್ಲಿ ಮೇಲ್ಮನವಿದಾರರಾದ ಹಾಸನ ಸಹಕಾರಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ರವರು ಅಪೀಲಿನಲ್ಲಿ ರಿಟ್ ಅಪೀಲ್ ಸಂ:734/2014 ರಲ್ಲಿ ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ಮತ್ತು ಸಂಬಂಧಿತ ಅಪೀಲುಗಳಲ್ಲಿ ಪ್ರಶ್ನಿಸಿರುವ ಅಂಶಗಳ ಬಗ್ಗೆ ತೀರ್ಪಿನಲ್ಲಿ ಪ್ರಸ್ತಾಪಿಸಿದೆ. ಹಾಸನ ಹಾಲು ಒಕ್ಕೂಟದ ಆಡಳಿತ ಮಂಡಳಿಯ ಚುನಾವಣೆ ಈ ಹಿಂದೆ ದಿ:1–7–2009 ರಲ್ಲಿ ನಡೆದಿದ್ದು, ಐದು ವರ್ಷಗಳ ಅವಧಿಗೆ ಮಂಡಳಿ ಆಯ್ಕೆಯಾಗಿರುತ್ತದೆ. ಅದರಂತೆ, ಮಂಡಳಿ ಅವಧಿಯು ದಿ:30–6–2014 ಕ್ಕೆ ಕೊನೆಗೊಳ್ಳುತ್ತದೆ. ಅಧಿನಿಯಮ ಪ್ರಕರಣ 28ಎ(4) ರೀತ್ಯಾ ದಿ:31–3–2014 ಕ್ಕೆ ಐದು ಸಹಕಾರಿ

ವರ್ಷಗಳೆಂದು ಮಂಡಳಿಯ ಅವಧಿಯನ್ನು ಅಂತ್ಯಗೊಳಿಸಿ ಚುನಾವಣೆಗೆ ವ್ಯವಸ್ಥೆ ಮಾಡುವುದು ಸರಿಯಲ್ಲವೆಂಬುದು ಅವರ ವಾದವಾಗಿದ್ದು, ಹಾಲಿ ಸಮಿತಿಯ ಅವಧಿ ದಿ:30-6-2014 ರವರೆಗೆ ಇರುತ್ತದೆ ಎಂದು ಅಪೀಲಿನಲ್ಲಿ ಪ್ರಸ್ತಾಪಿಸಲಾಗಿದೆ. ಅಧಿನಿಯಮ ಪ್ರಕರಣ 28ಎ(4) ಕ್ಕೆ ತಿದ್ದುಪಡಿಯನ್ನು ಅಧಿನಿಯಮ ಸಂಖ್ಯೆ: 3/2013 ರಲ್ಲಿ ಬದಲಿ ಸೇರ್ಪಡೆ ಮಾಡಿ "ಐದು ಸಹಕಾರಿ ವರ್ಷಗಳು" ಎಂಬ ಪದಗಳಿಗೆ ಬದಲಾಗಿ "ಚುನಾವಣಾ ದಿನಾಂಕದಿಂದ ಐದು ವರ್ಷಗಳು" ಎಂದು ಸೇರ್ಪಡೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಹಾಸನ ಹಾಲು ಒಕ್ಕೂಟವು ದಿ:31-3-2014 ರ ನಂತರ ಸಂಘಕ್ಕೆ ಆಡಳಿತಾಧಿಕಾರಿ ನೇಮಕ ಮಾಡುವ ಸಂಭವ ಇರುವ ಹಿನ್ನೆಲೆಯಲ್ಲಿ ಗೌರವ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿತ್ತು. ಗೌರವ ಉಚ್ಚ ನ್ಯಾಯಾಲಯದ ಪೂರ್ಣ ಪೀಠದ ಮುಂದೆ ಈ ಸಂಬಂಧ ದಾಖಲಿಸಲಾದ ಮೇಲ್ಮನವಿಯಲ್ಲಿ ಪರಿಗಣನೆಗಾಗಿ ಪ್ರಸ್ತಾಪಿಸಲಾದ ಅಂಶಗಳು ಈ ಕೆಳಕಂಡಂತೆ ಇರುತ್ತವೆ.

"i) Whether Section-28-A(4) of the Karnataka Cooperative Societies Act, 1959, as substituted by the amended Act dated 11.02.2013, is prospective or retrospective in nature?

ii) When the elections are to be conducted to a cooperative society by the second respondent – State Cooperative Societies Election Commission – and for any reason if the Election Commission fails to conduct the elections within the stipulated time, whether an Administrator can be appointed automatically under Section 28A(5) of the Act? And

iii) Whether Section 28A(4) is ultra vires?"

ಮೇಲ್ಕಂಡ ಅಂಶಗಳ ಬಗ್ಗೆ ಗೌರವ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು ಮೇಲ್ಮನವಿಗಳನ್ನು ಇತ್ಯರ್ಥಪಡಿಸಿ ಅಂತಿಮವಾಗಿ ದಿನಾಂಕ:30-4-2014 ರಂದು ಆದೇಶ ನೀಡಿದ್ದು ಆದೇಶದ ಆರಿಸಿದ ಭಾಗ ಈ ಕೆಳಕಂಡಂತೆ ಇರುತ್ತದೆ.

"i) Sub-section (4) of Section 28A of the Act has retrospective operation.

ii) The members of the existing boards shall continue to hold office till expiry of the period of five years from the date of their election and no administrator can be appointed till then."

ಅಲ್ಲದೇ, ಗೌರವ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು ರಿಟ್ ಅರ್ಜಿ ಸಂ:10005/2014 ರಲ್ಲಿ ದಿ:6-3-2014 ರಂದು ಗೌರವ ಏಕಸದಸ್ಯ ಪೀಠವು ನೀಡಿದ ತೀರ್ಪನ್ನು ರದ್ದುಗೊಳಿಸಿದೆ. ಆದೇಶದ ಪ್ರತಿಯು ದಿನಾಂಕ: 13-5-2014 ರಂದು ಲಭ್ಯವಾಗಿರುತ್ತದೆ.

ಗೌರವ ಉಚ್ಚ ನ್ಯಾಯಾಲಯವು ಮೇಲ್ಕಂಡ ಮೇಲ್ಮನವಿಗಳಲ್ಲಿ ದಿ:30-4-2014 ರಂದು ನೀಡಿರುವ ತೀರ್ಪಿನ ಬಗ್ಗೆ ಸುದೀರ್ಘವಾಗಿ ಸಹಕಾರ ಚುನಾವಣಾ ಆಯೋಗವು ದಿ:14-5-2014 ರಂದು ನಡೆದ ಸಭೆಯಲ್ಲಿ ಚರ್ಚಿಸಿದೆ.

ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳ ನಿ., ಬೆಂಗಳೂರು ಇದರ ಚುನಾವಣೆ ನಡೆದ ದಿನಾಂಕ:-15-7-2009 ಆಗಿದ್ದು, ಆಡಳಿತ ಮಂಡಳಿ ಅವಧಿಯು ದಿ:15-7-2014 ರವರೆಗೆ ಮುಂದುವರೆಯುತ್ತದೆ.

----3

ಕರ್ನಾಟಕ ರಾಜ್ಯ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ., ಬೆಂಗಳೂರು ಇದರ ಚುನಾವಣೆಯು ದಿನಾಂಕ:-16-7-2009 ಜರುಗಿದ್ದು, ಆಡಳಿತ ಮಂಡಳಿ ಅವಧಿಯು ದಿ:16-7-2014 ವರೆಗೆ ಮುಂದುವರೆಯುತ್ತದೆ.

ಗೌರವ ಉಚ್ಚ ನ್ಯಾಯಾಲಯದ ಪೂರ್ಣಪೀಠದ ತೀರ್ಪಿನ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ., ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳ ನಿ., ಬೆಂಗಳೂರು ಈ ಒಕ್ಕೂಟಗಳ ಆಡಳಿತ ಮಂಡಳಿ ಚುನಾವಣಾ ದಿನಾಂಕಗಳನ್ನು ಪರಿಷ್ಕರಿಸಿ ಹೊಸದಾಗಿ ಚುನಾವಣಾ ದಿನಾಂಕಗಳನ್ನು ಗೊತ್ತುಪಡಿಸುವ ಅಗತ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಈ ಎರಡು ಅಪೆಕ್ಸ್ ಸಂಘಗಳ ಆಡಳಿತ ಮಂಡಳಿ ಚುನಾವಣೆ ನಡೆಸುವ ಸಂಬಂಧ ಚುನಾವಣಾ ದಿನಾಂಕವನ್ನು ಪರಿಷ್ಕರಿಸಿ ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಿದೆ.

| ಕ್ರ ಸಂ | ಸಹಕಾರ ಸಂಘಗಳ ವರ್ಗ | ಹಾಲಿ ಆಡಳಿತ ಮಂಡಳಿ ಮುಗಿಯುವ ದಿನಾಂಕ | ಚುನಾವಣೆ ನಡೆಸಲು ಗೊತ್ತುಪಡಿಸಿದ ಪರಿಷ್ಕರಿಸಿದ ದಿನಾಂಕ |
|---|---|---|---|
| | ಅಧಿನಿಯಮ ಪ್ರಕರಣ 39ಎ (2) (ಡಿ), ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26ಎ ರೀತ್ಯಾ ನಾಲ್ಕನೇ ಹಂತ –<br>1) ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳ ನಿ., ಬೆಂಗಳೂರು<br>2) ಕರ್ನಾಟಕ ರಾಜ್ಯ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ., ಬೆಂಗಳೂರು | 1) 15-7-2014<br>2) 16-7-2014 | ದಿನಾಂಕ:06.09.2014 ರಿಂದ 08.09.2014 ರ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |

ಉಳಿದಂತೆ ಈ ಕೆಳಕಂಡ ಅಪೆಕ್ಸ್ ಸಂಘಗಳ ಸದಸ್ಯ ಸಂಘಗಳು ಪ್ರಾಥಮಿಕ ಸಂಘಗಳಾಗಿದ್ದು, ಮಂಡಳಿ ಚುನಾವಣೆಗಳು ಈಗಾಗಲೇ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ, ಗೌರವ ಉಚ್ಚ ನ್ಯಾಯಾಲಯದ ತೀರ್ಪನ್ನು ಗಮನದಲ್ಲಿಟ್ಟುಕೊಂಡು ಚುನಾವಣಾ ದಿನಾಂಕಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

| ಕ್ರ ಸಂ | ಸಹಕಾರ ಸಂಘಗಳ ವರ್ಗ | ಹಾಲಿ ಆಡಳಿತ ಮಂಡಳಿ ಮುಗಿಯುವ ದಿನಾಂಕ | ಚುನಾವಣೆ ನಡೆಸಲು ಗೊತ್ತುಪಡಿಸಿದ ಪರಿಷ್ಕರಿಸಿದ ದಿನಾಂಕ |
|---|---|---|---|
| | ಅಧಿನಿಯಮ ಪ್ರಕರಣ 39ಎ (2) (ಡಿ), ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26ಎ ರೀತ್ಯಾ ನಾಲ್ಕನೇ ಹಂತ – | | ದಿನಾಂಕ:19.07.2014 ರಿಂದ 21.07.2014 ರ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| 1 | ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ., ಬೆಂಗಳೂರು. | 28-06-2014 | |
| 2 | ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಲ ನಿ., ಬೆಂಗಳೂರು. | 29-06-2014 | |
| 3 | ಕರ್ನಾಟಕ ರಾಜ್ಯ ನೂಲಿನ ಗಿರಣಿಗಳ ಮಹಾಮಂಡಲ ನಿ., ಬೆಂಗಳೂರು. | 28-06-2014 | |
| 4 | ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಹಕಾರ ಮಹಾಮಂಡಲ ನಿ. ಬೆಂಗಳೂರು | 18-07-2014 | |
| 5 | ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಲ ನಿ., ಬೆಂಗಳೂರು (ಕಾವೇರಿ ಹ್ಯಾಂಡ್‌ಲೂಮ್ಸ್) | 30-06-2014 | |

----4

ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳ ನಿ., ಮೈಸೂರು ಸಂಘವು ಆಡಳಿತ ಮಂಡಳಿ ಚುನಾವಣೆ ಸಂಬಂಧ ದಿ:29-6-2014 ಕ್ಕೆ ಚುನಾವಣೆ ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳು ದಿನಾಂಕ ನಿಗದಿಪಡಿಸಿದ್ದು, ಚುನಾವಣಾ ಪ್ರಕ್ರಿಯೆ ಪ್ರಾರಂಭಗೊಂಡಿರುತ್ತದೆ. ಇದಕ್ಕೆ ಚುನಾವಣಾ ಆಯೋಗವು ಅನುಮೋದನೆಯನ್ನು ನೀಡಿರುತ್ತದೆ. ಸದರಿ ಮಹಾಮಂಡಳವು ಚುನಾವಣೆ ಸಂಬಂಧ ಕರಡು ಮತದಾರರ ಪಟ್ಟಿಯನ್ನು ಈಗಾಗಲೇ ಪ್ರಕಟಿಸಿದ್ದು, ಸದರಿ ಮಹಾಮಂಡಳಿಯು ಗೊತ್ತುಪಡಿಸಿದ ದಿನಾಂಕದಂದು ಚುನಾವಣೆ ನಡೆಸುತ್ತಿರುವುದರಿಂದ ಇದನ್ನು ಪರಿಷ್ಕರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ, ಗೌರವ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು ಮೇಲ್ಕಂಡ ಮೇಲ್ಮನವಿಗಳಲ್ಲಿ ನೀಡಿರುವ ತೀರ್ಪಿನಂತೆ ಚುನಾವಣಾ ಪೂರ್ವ ಇದ್ದ ಹಳೆಯ ಸಮಿತಿ ಅವಧಿಯು ಮುಗಿದ ನಂತರ ಹೊಸದಾಗಿ ಚುನಾಯಿತರಾಗುವ ಮಂಡಲಿಯು ಅಧಿಕಾರ ವಹಿಸಿಕೊಳ್ಳತಕ್ಕದ್ದಾಗಿದೆ.

ಮೇಲೆ ವಿವರಿಸಲಾದ ರಾಜ್ಯ ಮಟ್ಟದ / ಅಪೆಕ್ಸ್ ಸಂಘಗಳ ಆಡಳಿತ ಮಂಡಳಿಗೆ ಪರಿಷ್ಕೃತ ಚುನಾವಣಾ ದಿನಾಂಕ/ ಅವಧಿಯನ್ನು ಗೊತ್ತುಪಡಿಸಲಾಗಿದ್ದು, ಉಳಿದಂತೆ ಉಲ್ಲೇಖ (1) ರ ಅಧಿಸೂಚನೆಯಲ್ಲಿ ಕೊನೆಯ ಅಂಕಣದಲ್ಲಿ ಗೊತ್ತುಪಡಿಸಲಾದ ಈ ಕೆಳಕಂಡ ಷರತ್ತುಗಳು ಯಥಾಸ್ಥಿತಿ ಮುಂದುವರೆಯುತ್ತದೆ.

i. ಚುನಾವಣೆಗಳನ್ನು ನಡೆಸುವುದಕ್ಕಾಗಿ ಮತ್ತು ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವುದಕ್ಕಾಗಿ ತಗಲುವ ವೆಚ್ಚವನ್ನು ಸಂಬಂಧಿಸಿದ ಸಂಘಗಳೇ ಭರಿಸತಕ್ಕದ್ದು.

ii. ಪದಾವಧಿ ಮುಗಿದ ಸಂಘಗಳು, ಕೂಡಲೇ ಚುನಾವಣಾ ಆಯೋಗಕ್ಕೆ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಿಗೆ ವರದಿ ಸಲ್ಲಿಸತಕ್ಕದ್ದು. ಸಹಕಾರ ಚುನಾವಣಾ ಆಯೋಗವು /ಜಿಲ್ಲಾ ಚುನಾವಣಾಧಿಕಾರಿಗಳು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದ ಸಂಘಗಳ ಆಡಳಿತ ಮಂಡಳಿ ಹಾಗೂ ಮುಖ್ಯ ಕಾರ್ಯನಿರ್ವಾಹಕರು ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದು.

iii. ಜಿಲ್ಲಾ ಚುನಾವಣಾಧಿಕಾರಿಯು ನಿಯಮ 14 ರೀತ್ಯಾ ಚುನಾವಣೆ ಸಂಬಂಧ ನಮೂನೆ XI ರಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

iv. ಆ ನಂತರ ರಿಟರ್ನಿಂಗ್ ಅಧಿಕಾರಿಯು ಉದ್ದೇಶಿತ ಚುನಾವಣೆ ಸಂಬಂಧ ನಮೂನೆ XII ರಲ್ಲಿ 'ನಿಯಮ 14(3)' ರ ಚುನಾವಣಾ ನೋಟೀಸ್ ನೀಡುವ ಕುರಿತು ಜಿಲ್ಲಾ ಚುನಾವಣಾಧಿಕಾರಿ ನಿಗಾವಹಿಸತಕ್ಕದ್ದು ಮತ್ತು ಖಾತರಿ ಪಡಿಸಿಕೊಳ್ಳತಕ್ಕದ್ದು.

v. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಸಂಬಂಧಿಸಿದ ಸಂಘಗಳ / ಸಹಕಾರಿಗಳ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವಿಕೆ ಮತ್ತು ಪರಿಶೀಲನೆ, ಚುನಾವಣೆ ಸಿಬ್ಬಂದಿ, ಮತದಾನ ವ್ಯವಸ್ಥೆ, ಮತಕೇಂದ್ರಗಳ ಪರಿಶೀಲನೆ, ಮತ ಏಣಿಕೆ ವ್ಯವಸ್ಥೆ, ಚುನಾವಣಾ ಸಾಮಗ್ರಿಗಳ ವ್ಯವಸ್ಥೆ, ಚುನಾವಣೆ ಕೆಲಸ ಕಾರ್ಯಗಳ ಉಸ್ತುವಾರಿ ಕುರಿತಂತೆ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಅಗತ್ಯ ಸಹಕಾರ ನೀಡತಕ್ಕದ್ದು.

vi. ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ / ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಅಧಿನಿಯಮ / ನಿಯಮಗಳ ಅವಕಾಶದಂತೆ ಕ್ರಮ ಕೈಗೊಳ್ಳುವುದು ಮತ್ತು ಸಂಘಗಳ /ಸಹಕಾರಿಗಳ ಆಡಳಿತ ಮಂಡಳಿ ಮತ್ತು ಮುಖ್ಯ ಕಾರ್ಯನಿರ್ವಾಹಕರು, ಜಿಲ್ಲಾ ಚುನಾವಣಾಧಿಕಾರಿಗಳ ನಿರ್ದೇಶನಗಳನ್ವಯ ಹಾಗೂ ನಿಯಮಾನುಸಾರ ಅಗತ್ಯ ಕ್ರಮವಿಡಲು ಆದೇಶಿಸಿದೆ.

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು

ಇವರಿಗೆ:-

1. ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.

-----5

2. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560052.
3. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು ವಿಭಾಗ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು
4. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಅಪರ ನಿಬಂಧಕರು
5. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಜಂಟಿ ನಿಬಂಧಕರು
6. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು
7. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರು
8. ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರು
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಲ ರೇಸ್‌ಕೋರ್ಸ್ ರಸ್ತೆ, ಬೆಂಗಳೂರು
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ನೂಲಿನ ಗಿರಣಿಗಳ ಮಹಾಮಂಡಲ ನಿ., ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳ ನಿ., ಬೆಂಗಳೂರು
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ., ಬೆಂಗಳೂರು
13. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ., ಬೆಂಗಳೂರು
14. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಲ ನಿ., ಬೆಂಗಳೂರು.
15. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಹಕಾರ ಮಹಾಮಂಡಲ ನಿ. ಬೆಂಗಳೂರು
16. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಲ ನಿ., ಬೆಂಗಳೂರು (ಕಾವೇರಿ ಹ್ಯಾಂಡ್‌ಲೂಮ್ಸ್)
17. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳ ನಿ., ಮೈಸೂರು
18. ರಕ್ಷಾ ಕಡತ / ಕಛೇರಿ ಪ್ರತಿ.